**ಕರ್ನಾಟಕ ಪಶು ವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ**
**ಮೀನುಗಾರಿಕೆ ಸಂಶೋಧನಾ ಮತ್ತು ಮಾಹಿತಿ ಕೇಂದ್ರ (ಒ), ಹೆಬ್ಬಾಳ, ಬೆಂಗಳೂರು-560094**

Tel. & Fax No: 080-23516451

**ಸಹಪ್ರಾಧ್ಯಾಪಕರು & ಮುಖ್ಯಸ್ಥರು**

Email : fricbangalore@gmail.com

ಸಂಖ್ಯೆ: ಮೀ.ಸಂ.ಮಾ.ಕೇ.(ಒ)ಹೆ/ಹಪ್ರ/ **99** /2024-25 ದಿನಾಂಕ:30-12-2024

# ಹರಾಜು ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಬೆಂಗಳೂರಿನ ಹೆಬ್ಬಾಳದಲ್ಲಿರುವ ಮೀನುಗಾರಿಕೆ ಸಂಶೋಧನಾ ಮತ್ತು ಮಾಹಿತಿ ಕೇಂದ್ರ (ಒ), ಕ.ಪ.ಪ.ಮೀ.ವಿ.ವಿ., ಇಲ್ಲಿ ಅನುಪಯುಕ್ತ ವಸ್ತುಗಳನ್ನು **ದಿನಾಂಕ: 06.01.2025** ರಂದು **ಬೆಳಿಗ್ಗೆ 11.00 ಘಂಟೆಗೆ ಮೀನುಗಾರಿಕೆ ಸಂಶೋಧನಾ ಮತ್ತು ಮಾಹಿತಿ ಕೇಂದ್ರ ಹೆಬ್ಬಾಳ, ಬೆಂಗಳೂರು** ಆವರಣದಲ್ಲಿ ಬಹಿರಂಗವಾಗಿ ಹರಾಜು ಮಾಡಲಾಗುವುದು. ಇಷ್ಟವುಳ್ಳವರು ಹರಾಜಿನಲ್ಲಿ ಭಾಗವಹಿಸಿ ಅನುಪಯುಕ್ತ ವಸ್ತುಗಳನ್ನು ಪಡೆಯಬಹುದು.

**"ಹರಾಜಿನ ನಿಯಮಗಳು"**

1. ಹರಾಜಿನಲ್ಲಿ ಭಾಗವಹಿಸಲು ಇಚ್ಛಿಸುವವರು ಪ್ರತಿಯೊಬ್ಬರೂ ಕಡ್ಡಾಯವಾಗಿ ಮುಂಗಡವಾಗಿ ರೂ.2000.00 ಗಳನ್ನು ಠೇವಣಿಯಾಗಿ ನೀಡಬೇಕು.
2. ಹರಾಜು ಪ್ರಾರಂಭವಾಗುವುದಕ್ಕೆ ಮುನ್ನ ವಸ್ತುಗಳನ್ನು ಪರಿಷ್ಕರಿಸಬಹುದು.
3. ಹರಾಜಿನಲ್ಲಿ ಯಶಸ್ವಿ ಬಿಡ್ಡುದಾರರು ಪೂರ್ತಿ ಹಣವನ್ನು ಸ್ಥಳದಲ್ಲಿಯೇ ಪಾವತಿಸತಕ್ಕದ್ದು, ಇಲ್ಲದಿದ್ದರೆ ಪುನಃ ಹರಾಜಿನ ಮೂಲಕ ಬೇರೆಯವರಿಗೆ ವಸ್ತುಗಳನ್ನು ಕೊಡಲಾಗುವುದು
4. ಹರಾಜಿನ ವಿಷಯದಲ್ಲಿ ಕೇಂದ್ರದ ಮುಖ್ಯಸ್ಥರ ತೀರ್ಮಾನವೇ ಅಂತಿಮ ತೀರ್ಮಾನ ಮತ್ತು ಯಾವುದೇ ತಕರಾರಿಗೆ ಮಾನ್ಯತೆ ಇರುವುದಿಲ್ಲ
5. ಅನುತ್ತೀರ್ಣರಾದ ಬಿಡ್ಡುದಾರರಿಗೆ ಅವರು ಠೇವಣಿಯಾಗಿ ಇಟ್ಟ ಹಣವನ್ನು ಬಹಿರಂಗ ಹರಾಜು ಮುಗಿದ ನಂತರ ಹಿಂದಿರುಗಿಸಲಾಗುವುದು. ಇವರುಗಳು ಇದಕ್ಕೆ ಸಂಬಂಧಿಸಿದ ದಾಖಲಾತಿ ಪುಸ್ತಕದಲ್ಲಿ ಸಹಿ ಮಾಡಿ ಹಣವನ್ನು ವಾಪಸ್ಸು ಪಡೆಯತಕ್ಕದ್ದು.
6. ಯಾವ ಕಾರಣವನ್ನೂ ನೀಡದೆ ಬಹಿರಂಗ ಹರಾಜು ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಅಥವಾ ಮುಂದಕ್ಕೆ ಹಾಕುವ ಹಕ್ಕನ್ನು/ಅಧಿಕಾರ ಕೆಳಗೆ ಸಹಿ ಮಾಡಿರುವವರು ಹೊಂದಿರುತ್ತಾರೆ.
7. ಈ ಷರತ್ತುಗಳಲ್ಲಿ ನಮೂದಿಸದೇ ಇರುವ ಯಾವುದೇ ಷರತ್ತುಗಳನ್ನು ವಿಶ್ವವಿದ್ಯಾಲಯ/ಕೇಂದ್ರದ ಹಿತದೃಷ್ಟಿಯಿಂದ ವಿಧಿಸಿದಲ್ಲಿ ಪಾಲಿಸಲು ಹೆಚ್ಚಿನ ಬಿಡ್ಡುದಾರರು ಬದ್ಧರಾಗಬೇಕಾಗುತ್ತದೆ.
8. ಬಹಿರಂಗ ಹರಾಜು ಮಂಜೂರಾದ ಮೇಲೆ ಪೂರ್ತಿ ಹಣಕಟ್ಟಿದ ನಂತರವೇ ಅನುಪಯುಕ್ತ ವಸ್ತುಗಳನ್ನು ಬಹಿರಂಗ ಹರಾಜಿನ ಬಿಡ್ಡುದಾರರ ವಶಕ್ಕೆ ಕೊಡಲಾಗುವುದು.

ರಾಜಣ್ಣ. ಕೆ.ಬಿ.

**ಸಹ ಪ್ರಾಧ್ಯಾಪಕರು & ಮುಖ್ಯಸ್ಥರು**

ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು
ಮೀ.ಸಂ.ಮಾ.ಕೇ (ಒ)
ಕ.ಪ.ಪ.ಮೀ.ವಿ.ವಿ. 10ನೇ ಅಡ್ಡರಸ್ತೆ.
ಮಯೂರ ಬೀದಿ. ಪಾಪಣ್ಣ ಬಡಾವಣೆ.
ಹೆಬ್ಬಾಳ ಹೊರವರ್ತುಲ ರಸ್ತೆ. ಬೆಂಗಳೂರು-94.

**ಪ್ರತಿಯನ್ನು:**

1. ಸಂಶೋಧನಾ ನಿರ್ದೇಶಕರು, ಕ.ಪ.ಪ.ಮೀ.ವಿ.ವಿ ಬೀದರ ರವರ ಮಾಹಿತಿಗಾಗಿ.
2. ಕುಲಸಚಿವರು, ಕ.ಪ.ಪ.ಮೀ.ವಿ.ವಿ ಬೀದರ ರವರ ಮಾಹಿತಿಗಾಗಿ.
3. ಹಣಕಾಸು ನಿಯಂತ್ರಣಾಧಿಕಾರಿಗಳು, ಕ.ಪ.ಪ.ಮೀ.ವಿ.ವಿ ಬೀದರ ರವರ ಮಾಹಿತಿಗಾಗಿ.
4. ಕುಲಪತಿಗಳ ಹಿರಿಯ ಆಪ್ತ ಕಾರ್ಯದರ್ಶಿ ಗ್ರೇಡ್-1, ಕಪಪಮೀವಿವಿ, ಬೀದರ ರವರ ಮಾಹಿತಿಗಾಗಿ
5. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರು, ಹೆಬ್ಬಾಳ, ಬೆಂಗಳೂರು ರವರ ಮಾಹಿತಿಗಾಗಿ ಮತ್ತು ಪ್ರಕಟಣಾ ಫಲಕದಲ್ಲಿ ಪ್ರಕಟಿಸಲು ಕೋರಲಾಗಿದೆ.
6. ಡೀನ್/ಆವರಣದ ಮುಖ್ಯಸ್ಥರು, ಪಶುವೈದ್ಯಕೀಯ/ ಹೈನುಗಾರಿಕಾ ಮಹಾವಿದ್ಯಾಲಯ, ಹೆಬ್ಬಾಳ, ಬೆಂಗಳೂರು (ಪ್ರಕಟಣಾ ಫಲಕದಲ್ಲಿ ಪ್ರಕಟಿಸಲು ಕೋರಲಾಗಿದೆ)
7. ಮೀನುಗಾರಿಕೆ ಸಂಶೋಧನಾ ಮತ್ತು ಮಾಹಿತಿ ಕೇಂದ್ರ, ಹೆಸರಘಟ್ಟ, ಬೆಂಗಳೂರು (ಪ್ರಕಟಣಾ ಫಲಕದಲ್ಲಿ ಪ್ರಕಟಿಸಲು ಕೋರಲಾಗಿದೆ)
8. ಕಚೇರಿ ಕಡತ.
9. ಹೈಡೀಲ್ಸ್ ಟೆಕ್ನಾಲಾಜೀಸ್, ಬೀದರ (ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಪ್ರಕಟಸಲು ಕೋರಲಾಗಿದೆ).